ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 544/2019

ಸಿ.ಡಬ್ಲ್ಯೂ -5, ಪಿ.ಡಬ್ಲ್ಯೂ -5

ದಿಃ **18.12.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಜ್ಞಾನೇಶ |
| ತಂದೆ/ಗಂಡನ ಹೆಸರು | ಶಿವಣ್ಣ |
| ವಯಸ್ಸು | 49 ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಹಳ್ಳದಮನುಗನಹಳ್ಳಿ ಗ್ರಾಮ |

**<u>ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:</u>**

ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು 2(ಬಿ) ಎಂದು ಗುರುತಿಸಲಾಯಿತು. ದಿಃ 20.01.2016 ರಂದು ಗಲಾಟೆ ನಡೆಯುತ್ತಿತ್ತು. ಗೊಂಪಗೇರೆಗೆ ಹೋಗುತ್ತಿದ್ದಾಗ ಜಗಳ ನಡೆಯುತ್ತಿತ್ತು. ಅದನ್ನು ಬಿಡಿಸಿರುತ್ತೇನೆ. ನ್ಯಾಯಾಲಯದ ಮು.ಮಾ-1 ಮತ್ತು 2 ಆ ದಿನ ವಶಪಡಿಸಿಕೊಂಡಿರುವ ದೊಣ್ಣೆಗಳು ಇದ್ದರೂ ಇರಬಹುದು ಎಂದು ನುಡಿಯುತ್ತಾರೆ. ಮಹಜರ್ ನ್ನು 10.30-11.00 ಗಂಟೆವರೆಗೂ ಜರುಗಿಸಿರುತ್ತಾರೆ. ಮಹಜರ್ ಕಾಲಕ್ಕೆ ನನ್ನೊಂದಿಗೆ ಬಿಳಿಕೆರೆ ಚಂದ್ರು ಇದ್ದರು, ಇನ್ನೊಬ್ಬರಿದ್ದು, ಅವರ ಹೆಸರು ಜ್ಞಾಪನ ಇಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ ವಕೀಲರಿಂದಃ</u>**

ಮಹಜರ್ ನ್ನು ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆವರೆಗೂ ಜರುಗಿಸಿದರು ಎಂದರೆ ಸರಿ. ಮಹಜರ್ ಕಾಲಕ್ಕೆ ನಿಮ್ಮೊಂದಿಗೆ ಚಾಸಾ-6 ರವರು ಇದ್ದರು ಎಂದರೆ ಸಾಕ್ಷಿ

ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಮು,ಮಾ-1 ಮತ್ತು 2 ನ್ನು ನಿಮ್ಮ ಸಮಕ್ಷಮ ಅಮಾನತುಪಡಿಸಿಕೊಂಡರು ಎಂದರೆ ಸಾಕ್ಷಿ ನೆನಪಿಲ್ಲ, ಅದೇ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿತರಿಗೆ ಸಹಾಯ ಮಾಡಲು ಮು.ಮಾ-1 ಮತ್ತು 2 ಎಂದು ನೆನಪಿದ್ದರೂ, ನೆನಪಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲು ಆರೋಪಿ ಪರ ಶ್ರೀ ವಿ.ವಿ. ವಕೀಲರಿಂದಃ**

ಮಹಜರ್ ಕಾಲಕ್ಕೆ ಪೊಲೀಸರು ನನಗೆ ನೊಟೀಸ್ ನೀಡಿರುವುದಿಲ್ಲ. ನಿಪಿ-2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆಂದರೆ ಸರಿ. ಚಾಸಾ-1 ರವರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿಯವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.